**4ನೇ ತರಗತಿ** **ಪರ್ಯಾಯ ಶೈಕ್ಷಣಿಕ ಯೋಜನೆ 2021-22** **ದ್ವಿತೀಯ ಭಾಷೆ – ಕನ್ನಡ**

**ಡಿಸೆಂಬರ್ ಮಾಹೆ**

| ಕ್ರಸಂ | ತಿಂಗಳುವಾರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | **ಡಿಸಂಬರ್ 1ನೇ ವಾರ**<br><br>**ಡಿಸಂಬರ್ 2ನೇ ವಾರ** | **ಡಾ. ಸಲೀಂ ಅಲಿ (ಗದ್ಯ)**<br>**ಕ್ಷೇತ್ರ- ಬರೆಯುವುದು.**<br>**ಸಾಮರ್ಥ್ಯ:-** ಒತ್ತಕ್ಷರ ಪದಗಳನ್ನು ಓದುವುದು, ಬರೆಯುವುದು ಹಾಗೂ ಲೇಖನ ಚಿಹ್ನೆಗಳನ್ನು ಗಮನಿಸಿ ಓದುವುದು.<br>• ಒತ್ತಕ್ಷರ ಪದಗಳನ್ನು ಓದುವುದು.<br>• ಸಲೀಂ ಅಲಿಯವರ ಬಾಲ್ಯಜೀವನ , ವಿದ್ಯಾಭ್ಯಾಸ , ಪಕ್ಷಿ ಪ್ರೇಮದ ಬಗ್ಗೆ ತಿಳಿಯುವುದು.<br>• ಸಲೀಂಅಲಿಯವರ ವಿದೇಶ ಪ್ರವಾಸ , ಪಕ್ಷಿಗಳ ಬಗೆಗಿನ ಅಧ್ಯಯನ ಮತ್ತು ಅವರಿಗೆ ದೊರೆತ ಪ್ರಶಸ್ತಿಗಳ ಬಗ್ಗೆ ತಿಳಿಯುವುದು. | • ಬಾ ಬಾ ಗಿಳಿಯೆ ಬಣ್ಣದ ಗಿಳಿಯೆ ಹಣ್ಣನು ಕೊಡುವೆನು ಬಾ ಬಾ ಬಾ. . . . . ಶಿಶುಗೀತೆ ಹೇಳಿಸುವುದು.<br>• ಮಿಂಚು ಪಟ್ಟಿ ಮತ್ತು ಚಾರ್ಟ್‌ನಲ್ಲಿನ ಒತ್ತಕ್ಷರ ಪದಗಳನ್ನು ಓದುವರು. ಮತ್ತು ಸಜಾತಿಯ ಒತ್ತಕ್ಷರಗಳನ್ನು ಗುರುತಿಸಿ ಓದುವರು ಮತ್ತು ಬರೆಯುವರು.<br>• ಶಿಕ್ಷಕರು ಪಠ್ಯವನ್ನು ಸ್ವರಭಾರದೊಂದಿಗೆ ಓದುವರು, ಮಕ್ಕಳು ಆಲಿಸುವರು.<br>ಡಾ.ಸಲೀಂಅಲಿಯವರು ಬಾಲ್ಯದಲ್ಲಿ ಪಕ್ಷಿಗಳ ಬಗ್ಗೆ ತೋರಿದ ಅಗಾಧ ಪ್ರೀತಿ ಕಾಳಜಿ ಮತ್ತು ತಮ್ಮ ಜೀವನವನ್ನು ಪಕ್ಷಿ ಅಧ್ಯಯನಕ್ಕೆ ಮೀಸಲಿಟ್ಟ ಕ್ಷಣ ಮುಂತಾದವುಗಳ ಬಗ್ಗೆ ವಿವರಿಸಿ ಹೇಳುವರು. ಮತ್ತು ಮಕ್ಕಳಿಂದ ಪಠ್ಯದ ಸಾಲುಗಳನ್ನು ಓದಿಸುವರು.<br>ಮಕ್ಕಳು ಲೇಖನ ಚಿಹ್ನೆಗಳಿಗನುಗುಣವಾಗಿ ಸ್ವರಭಾರದೊಂದಿಗೆ ಓದಲು ಕಲಿಯುವರು.<br>ಚ:- ಪಠ್ಯದಲ್ಲಿನ ಒತ್ತಕ್ಷರ ಪದಗಳನ್ನು ಆಯ್ದು ಬರೆಯುವರು ಮತ್ತು ಓದುವರು.ಸಜಾತಿ ಮತ್ತು ವಿಜಾತಿ ಒತ್ತಕ್ಷರ ಗುರುತಿಸುವರು.<br>• ಶಿಕ್ಷಕರು ಪಠ್ಯದ ಉಳಿದ ಭಾಗವನ್ನು ಲೇಖನ ಚಿಹ್ನೆಗಳಿಗನುಗುಣವಾಗಿ ಸ್ವರಭಾರದೊಂದಿಗೆ ಓದುವರು.<br>ಸಲೀಂ ಅಲಿಯವರು ಪಕ್ಷಿ ಪ್ರಭೇದಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಪತ್ರಿಕೆಗಳಲ್ಲಿ ಲೇಖನ ಬರೆದರು. ಅನೇಕ ಪ್ರಶಸ್ತಿಗಳನ್ನು ಪಡೆದರು. ಅವರು ಪಕ್ಷಿ | • ರಾಗಬದ್ಧವಾಗಿ ಶಿಶುಗೀತೆ ಹೇಳುವರು.<br>• ಕೊಟ್ಟಿರುವ ಪದಗಳ ಗುಂಪಿನಲ್ಲಿ ಸಜಾತಿಯ ಒತ್ತಕ್ಷರ ಪದ ಆಯ್ದು ಬರೆಯುವರು.<br>• ಸ್ವಭಾರದೊಂದಿಗೆ ಓದುವರು.<br>• ಒತ್ತಕ್ಷರ ಪದಗಳನ್ನು ಆಯ್ದುಬರೆಯುವರು.<br>• ಅಭ್ಯಾಸಹಾಳೆ-1<br>• ಲೇಖನ ಚಿಹ್ನೆಗಳನ್ನು ಗುರುತಿಸಿ ಓದುವರು. |

| | | | | |
|---|---|---|---|---|
| | | • ಭಾಷಾ ಚಟುವಟಿಕೆ– ಲೇಖನ ಚಿಹ್ನೆ ಮತ್ತು ಬಳಕೆ , ಪರಿಸರ ಕುರಿತಾದ ಘೋಷಣೆಗಳು | ಪ್ರಪಂಚಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಬಗ್ಗೆ ವಿವರಿಸುವರು.<br>ಮಕ್ಕಳಿಗೆ ಪರಿಸರ ಪ್ರೇಮ ಮತ್ತು ಪ್ರಾಣಿ ಪಕ್ಷಿಗಳ ಬಗ್ಗೆ ತಿಳಿದು ವಿಷಯ ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು.<br>ಚ:– ಲೇಖನ ಚಿಹ್ನೆಗಳನ್ನು ಗುರುತಿಸಿ ಹೇಳುವರು.<br>ಚ:– ಪ್ರಾಣಿಗಳ ಮತ್ತು ಪಕ್ಷಿಗಳ ಚಿತ್ರಕ್ಕೆ ಬಣ್ಣ ಹಾಕುವುದು. ಚಿತ್ರಗಳನ್ನು ಸಂಗ್ರಹಿಸುವುದು.<br>• ಪೂರ್ಣವಿರಾಮ,ಅಲ್ಪವಿರಾಮ,ಅರ್ಧವಿರಾಮ, ಪ್ರಶ್ನಾರ್ಥಕ ಮುಂತಾದ ಲೇಖನ ಚಿಹ್ನೆಗಳನ್ನು ತಿಳಿಯುವರು, ಗುರುತಿಸಿ ಬಳಕೆಯ ಬಗ್ಗೆ ತಿಳಿಯುವರು.<br>• ವಾಕ್ಯಗಳಿಗೆ ಲೇಖನ ಚಿಹ್ನೆ ಹಾಕುವರು. ಘೋಷಣೆಗಳನ್ನು ನಕಲು ಮಾಡಿ ಬರೆಯುವರು ಮತ್ತು ಓದುವರು.<br>ಮನೆಗೊಂದು ಮರ ಊರಿಗೊಂದು ವನ.<br>ಪಕ್ಷಿ ಪ್ರಾಣಿಗಳೂ ನಮ್ಮಂತೆಯೇ ಜೀವಿಗಳು.<br>ಅರಣ್ಯ ಬೆಳೆಸಿ, ಜೀವ ಉಳಿಸಿ . | • ಪ್ರಾಣಿ ಪಕ್ಷಿಗಳ ಚಿತ್ರಕ್ಕೆ ಬಣ್ಣ ಹಾಕುವರು.<br>• ಅಭ್ಯಾಸದ ಹಾಳೆ–2 |
| **03** | **ಡಿಸಂಬರ್ 3ನೇ ವಾರ** | **ಪುಟ್ಟನ ಗಾಳಿಪಟ (ಪದ್ಯ)**<br>**ಕ್ಷೇತ್ರ**– ಮಾತನಾಡುವುದು<br>**ಸಾಮರ್ಥ್ಯ**:– ಸ್ವರಭಾರದೊಂದಿಗೆ ಕಥೆ ಕವನಗಳನ್ನು ಹೇಳುವುದು.<br>• ಗಾಳಿಪಟದ ವೈವಿಧ್ಯತೆಯ ಬಗ್ಗೆ ತಿಳಿಯುವರು. | • ಅಣ್ಣನು ಮಾಡಿದ ಗಾಳಿಪಟ, ಬಣ್ಣದ ಹಾಳೆಯ ಗಾಳಿಪಟ ಎಂಬ ಶಿಶುಗೀತೆಯನ್ನು ಹೇಳಿಸುವುದು.<br>• ಗಾಳಿಪಟದ ಕುರಿತಾದ ಪ್ರಶ್ನೆಗಳನ್ನು ಕೇಳುವುದು.<br>• ವಿವಿಧ ಬಗೆಯ ಗಾಳಿಪಟವನ್ನು ತಯಾರಿಸುವ ಕುರಿತಾದ ಪ್ರಶ್ನೆಗಳಿಗೆ ಉತ್ತರಿಸುವರು.<br>• ಪುಟ್ಟನ ಗಾಳಿಪಟ ಪದ್ಯವನ್ನು ರಾಗಬದ್ಧವಾಗಿ ಹೇಳುತ್ತಾ ಮಕ್ಕಳಿಂದ ಒಂದೊಂದೇ ಸಾಲನ್ನು ಹಾಡಿಸುವುದು.<br>• ಗಾಳಿಪಟದ ವಿವಿಧ ಹಾಡುಗಳನ್ನು ಮೊಬೈಲ್ | • ಶಿಕ್ಷಕರ ಪ್ರಶ್ನೆಗಳಿಗೆ ಉತ್ತರ ಹೇಳುವುದು.<br>• ಅಭ್ಯಾಸ ಹಾಳೆ–1 |

| | | | | |
|---|---|---|---|---|
| **04** | **ಡಿಸಂಬರ್ 4ನೇ ವಾರ** | • ಸಣ್ಣ ಕಥೆಗಳ ಪರಿಚಯ.<br>• ವಿನಯ,ಪ್ರೀತಿ, ಸಹಕಾರ, ಸಹಾಯ, ಇತ್ಯಾದಿ ಮೌಲ್ಯಗಳನ್ನು ತಿಳಿಯುವರು. | ಮೂಲಕ ಕೇಳಿಸುವುದು.<br>• ಹೊಸಪದಗಳ ಅರ್ಥ ತಿಳಿಸುವುದು.<br>• ಚಿತ್ರಪಟದ ಮೂಲಕ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಸಣ್ಣ ಕಥೆಯನ್ನು ಹೇಳುವುದು.<br>ಉದಾಹರಣೆ– ಒಂಟೆ ಮತ್ತು ನರಿಯ ಕಥೆ, ಮೂರು ಮೀನುಗಳ ಕಥೆ<br>• ಶುಭ ನುಡಿ– ಮಕ್ಕಳಿಂದ ಶುಭನುಡಿಗಳನ್ನು ಹೇಳಿಸುವುದು.<br>ಉದಾ– ಬುದ್ದಿವಂತನು ಕಣ್ಣಿನಿಂದಲೇ ಮಾತನಾಡುತ್ತಾನೆ.<br>ಒಳ್ಳೆಯ ಕೆಲಸವನ್ನು ಮಾಡುವುದು ಸುಖ ಜೀವನಕ್ಕೆ ಕಾರಣವಾಗುತ್ತದೆ. | • ಮಕ್ಕಳು ಕಥೆಯ ಸ್ವಾರಸ್ಯವನ್ನು ಸವಿದು, ಪ್ರಶ್ನೆಗಳಿಗೆ ಉತ್ತರಿಸುವರು.<br>• ಶುಭನುಡಿಗಳನ್ನು ಸಂಗ್ರಹಿಸಿ ಬರೆಯುವರು.<br>• ಅಭ್ಯಾಸ ಹಾಳೆ–2 |

## ಅಭ್ಯಾಸ ಹಾಳೆ–1

### ಡಾ: ಸಲೀಂ ಆಲಿ

**I.ಹೊಂದಿಸಿ ಬರೆಯಿರಿ**

| ಅ | ಬ |
|---|---|
| 1.ಡಬ್ಲ್ಯೂ ಎಸ್ ಮಿಲ್ಲರ್ಡ | ಸಲೀಂಅವರ ಪತ್ನಿ |
| 2 ಅನಿರುದ್ದಿನ್ ತಯಾಬ್ಜಿ | ಬರ್ಮಾ |
| 3 ತೆಹ್ಮಿನಾ | ಜರ್ಮನಿ |
| 4 ಅದಿರಿನ ಗಣಿ | ಪ್ರಕೃತಿ ವಿಜ್ಞಾನ ಸಂಘದ ಪಕ್ಷಿ ತಜ್ಞ |
| 5 ಬರ್ಲಿನ್ ವಿಶ್ವವಿದ್ಯಾಲಯ | ಸಲೀಂ ಅಲಿರವರ ಸೋದರ ಮಾವ |

1. ------------------- -------
2. ---------------------------
3. ---------------------------
4. --------------------------
5. ----------------------------

**II.ತಪ್ಪಾಗಿರುವುದನ್ನು ಸರಿಪಡಿಸಿ ಬರೆಯಿರಿ.**

1. ಸಲೀಂ ಅಲಿ ಹತ್ತು ಮಕ್ಕಳಲ್ಲಿ ಮೊದಲನೆಯವರು .

-----------------------------------------------------------------------

2 ಪ್ರಕೃತಿ ವಿಜ್ಞಾನ ಸಂಸ್ಥೆಯ ಪಕ್ಷಿತಜ್ಞ ಡಬ್ಲ್ಯೂ ಎಸ್ ಮಿಲ್ಲರ್ಡ.

-----------------------------------------------------------------------

3 ಅಮೀರುದ್ದೀನ್ ತಯಾಬ್ದಿಯವರು ತುಂಬ ಬಡವರಾಗಿದ್ದರು.

-----------------------------------------------------------------------

**III.ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಕಾಡು ಗುಬ್ಬಚಿಯ ಕುತ್ತಿಗೆಯ ಕೆಳಗೆ ಯಾವ ಬಣ್ಣವಿತ್ತು?

_______________________________________________________________________

2. ಸಲೀಂ ಅಲಿ ಯಾವಾಗ ಮತ್ತು ಎಲ್ಲಿ ಜನಿಸಿದರು ?

____________________________________________________________

3. ಭಾರತದಲ್ಲಿ ಪಕ್ಷಿ ಅಧ್ಯಯನಕ್ಕೆ ನಾಂದಿ ಹಾಡಿದವರು ಯಾರು ?

____________________________________________________________

**IV.ಕೊಟ್ಟಿರುವ ಪದಗಳಿಗೆ ಸಮನಾರ್ಥಪದ ಬರೆಯಿರಿ.**

1. ಕುತೂಹಲ ----------------------------
2. ತಜ್ಞ ------------------------------
3. ಸಂಸ್ಥೆ -------------------------------
4. ವೀಕ್ಷಣೆ ------------------------------

**V.ಮಾದರಿಯಂತೆ ಕೊಟ್ಟಿರುವ ಪದವನ್ನು ಬರೆದು ಜೋಡಿ ಪದವನ್ನು ಪೂರ್ಣಗೊಳಿಸಿ.**

ಮಾದರಿ : ನವರಾತ್ರಿ **ರಾತ್ರಿ** ರಾಣಿ

( ಕಡ್ಡಿ, ಮರ, ದೇವ, ಬಂಡೆ, ಕಾಯಿ )

1. ಸೀಸದ -------- ---------ಹುಳು
2. ಮಾವಿನ ------ ---------ಸೇಬು
3. ತೆಂಗಿನ -------- --------ತುರಿ
4. ಜಾರು --------- --------ಕಲ್ಲು
5. ಗುರು ---------- ---------ಸ್ಥಾನ

**VI. ಒಂದು ಪಕ್ಷಿಯ ಚಿತ್ರ ಬರೆದು ಬಣ್ಣ ಹಾಕಿ**

## ಅಭ್ಯಾಸ ಹಾಳೆ–2

**I.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1.ಗಾಳಿ ಪಟವು ಯಾರ ಕೈಯಲಿತ್ತು ?

______________________________________________________________________

2.ಗಾಳಿ ಪಟ ಯಾವುದಕ್ಕೆ ಸಿಕ್ಕಿಹಾಕಿಕೊಂಡಿತ್ತು ?

______________________________________________________________________

3. ಗಾಳಿಪಟ ಯಾರ ಪಾಲಾಯಿತು ?

______________________________________________________________________

**II.ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

ಗೆಳೆಯರು ------------------------------

-------------------------------ನಗಿಸಿದರು

ಪುಟ್ಟನ----------------------------------

-------------------------------ಪಾಲಾಯ್ತು

**III.ಗುಂಪಿಗೆ ಸೇರದ ಪದವನ್ನು ಗುರುತಿಸಿ ಅಡಿಗೆರೆ ಎಳೆಯಿರಿ.**

1. ಆನೆ, ಮರ, ಗಿಡ, ಬಳ್ಳಿ
2. ರಾಮು, ರಹೀಮ, ಜೋಸೆಫ್, ಕೋಗಿಲೆ
3. ದಾಂಡು, ಮೈಸೂರು, ಚೆಂಡು, ಗೋಲಿ
4. ಹಸಿರು, ಹಳದಿ, ಹಸು, ಕೆಂಪು

**IV.ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ.**

1. ಪೆಚ್ಚು – ____________________ 2. ಜಂಭ – ________________________

3 ಕರಗು – ____________________ 4 .ಬಳಗ – ________________________

**V.ಮಾದರಿಯಂತೆ ಬಿಡಿಸಿ ಬರೆಯಿರಿ .**

ಮಾದರಿ; ಮನೆಯಾಚೆ= ಮನೆಯ+ಆಚೆ

1.ಕುಣಿದಾಡಿ =______________________

2.ಓಡೋಡಿ =______________________

3.ಪೆಚ್ಚಾಯ್ತು =______________________

4.ಪಾಲಾಯ್ತು =______________________

## ಅಭ್ಯಾಸ ಹಾಳೆ –3

**I.ಸ್ವಂತ ವಾಕ್ಯದಲ್ಲಿ ಬರೆಯಿರಿ .**

1. ಬಳಗ=

________________________________________________

2. ಜಂಭ=

________________________________________________

3. ಗಾಳಿಪಟ =

________________________________________________

**II.ಕೆಳಗಿನ ವಾಕ್ಯಗಳನ್ನು ಸ್ಪಷ್ಟ ಉಚ್ಚಾರದೊಂದಿಗೆ ಹೇಳಿರಿ .**

1.ಎಲ್ಲಪ್ಪ ಎಲ್ಲಾ ಬೆಲ್ಲ ತಿಂದನು.

2.ಹಕ್ಕಿ ಅಕ್ಕಿ ಕುಕ್ಕಿ ಕುಕ್ಕಿ ತಿಂದಿತು.

3.ಸುಗ್ಗಿಯ ಕಾಲ ನುಗ್ಗಿ ಬಂದಾಗ ರೈತರಿಗೆ ಹಿಗ್ಗೋಹಿಗ್ಗು .

**III.ಪ್ರಾಸ ಪದಗಳನ್ನು ಬರೆಯಿರಿ.**

1. ನೋಡುತಲಿ – ____________ 2.ಹಾಳಾಯ್ತು– ________________

3 ಸಿಲುಕಿತ್ತು – ______________ 4. ಬಿಡಿಸಿದರು – ________________

**IV.ಕೆಳಗಿನ ಪ್ರಶ್ನೆಗಳಿಗೆ 2/3ವಾಕ್ಯಗಳಲ್ಲಿ ಉತ್ತರಿಸಿ.**

1. ಪುಟ್ಟನು ಗೆಳೆಯನಿಗೆ ಜಂಭದಿಂದ ಏನನ್ನು ಹೇಳಿದನು?

________________________________________________

________________________________________________

2. ಗಾಳಿಪಟ ಪದ್ಯದಲ್ಲಿ ಕಂಡುಬರುವ ನೀತಿಯೇನು?

________________________________________________

________________________________________________

**V.ಗಾಳಿಪಟದ ಸುಂದರವಾದ ಚಿತ್ರ ಬರೆದು ಬಣ್ಣ ಹಾಕಿರಿ.**